# *4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು*

*ಎಸ್‌ಸಿ.* 258/2023

| | | | | |
|---|---|---|---|---|
| **ಸಾಕ್ಷಿದಾರರ ಹೆಸರು** | ಃ | ಶ್ರೀ ರಾಮೇಗೌಡ | *ಪ್ರಮಾಣ ಮಾಡಿಸಿದ ದಿನಾಂಕಃ* | |
| **ತಂದೆ/ಗಂಡನ ಹೆಸರು** | ಃ | ಶ್ರೀ ನಿಂಗೇಗೌಡ | **22.07.2024** | |
| **ವಯಸ್ಸು** | ಃ | **41 ವರ್ಷ** | | |
| **ವೃತ್ತಿ** | ಃ | ವ್ಯವಸಾಯ ಮತ್ತು ಗೋಶಾಲೆ ಕೆಲಸ | **ಪ್ರಾ.ಸಾ.** ಃ | **01** |
| **ವಾಸಸ್ಥಳ** | ಃ | ಕೆರೆತೋಣ್ಣುರು | **ಚಾ.ಸಾ.** ಃ | **01** |

**ಮುಖ್ಯ ವಿಚಾರಣೆ ಃ ಸರ್ಕಾರಿ ಅಭಿಯೋಜಕರಿಂದಃ**

. ನಾನು ಕೆರೆತೋಣ್ಣುರಿನಲ್ಲಿ ವಾಸವಿದ್ದು ನನ್ನ ಹೆಂಡತಿ ಮೃತ ಮಮತಾ ಕೆರೆತೊಣ್ಣುರಿನಲ್ಲಿ ಅಂಗನವಾಡಿ ಶಿಕ್ಷಕಿಯಾಗಿ ಕೆಲಸ ಮಾಡುತ್ತಿದ್ದರು. ನಮಗೆ ಚಿರಾಗ್ ಮತ್ತು ಜಾಗೃತಿ ಎನ್ನುವ ಇಬ್ಬರು ಮಕ್ಕಳಿದ್ದಾರೆ. ದಿಃ*24.05.2023* ರಂದು ಬೆ.*10.45*ಕ್ಕೆ ನನ್ನ ಹೆಂಡತಿ ಪಾಂಡವಪುರಕ್ಕೆ ಹೋಗುವುದಾಗಿ ಹೇಳಿದ್ದರು. ಮದ್ಯಾಹ್ನ *12* ಗಂಟೆಗೆ ನನ್ನ ಹೆಂಡತಿ ನನಗೆ ಕರೆ ಮಾಡಿ ಮಿಷಾ ಕಂಪನಿಯಿಂದ ಪಾರ್ಸಲ್ ಬರುತ್ತದೆ ತೆಗೆದುಕೊಳ್ಳಿ ಎಂದು ಹೇಳಿದ್ದರು. ನಂತರ ಮದ್ಯಾಹ್ನ *4* ಗಂಟೆಗೆ ನನ್ನ ಸ್ನೇಹಿತ ಪವಿತ್ರರಾಜ್ ಎನ್ನುವಾತ ಕರೆ ಮಾಡಿ ನಿನ್ನ ಹೆಂಡತಿಗೆ ಸಿದ್ದಲಿಂಗಪುರದ ಬಳಿ ಸೀರಿಯಸ್ ಆಗಿದೆಯಂತೆ ನೀನು ಹೋಗಬೇಕಂತೆ ಹೇಳಿದ್ದರು. ಆ ಕೂಡಲೇ ನಾನು, ಕುಮಾರ, ಗೋಪಾಲ, ನನ್ನ ಹೆಂಡತಿ ಚಿಕ್ಕಮ್ಮ ಕವಿತಾ ಮತ್ತು ಅವರ ಗಂಡ ನಾಗೇಗೌಡ ರವರನ್ನು ಕರೆದುಕೊಂಡು ಸಿದ್ದಲಿಂಗಪುರದ ಬಳಿ ಬಂದು ಕೇಳಿದಾಗ ಅಲ್ಲಿ ಸೇರಿದ್ದ ಜನರು ಬೇಕರಿಯ ಬಳಿ ಮೊಹನ್ ಕುಮಾರ್ ಎನ್ನುವಾತನು ನನ್ನ ಹೆಂಡತಿಗೆ ರಾಡಿನಿಂದ ಹೊಡೆದು ಓಡಿ ಹೋಗಿರುವುದಾಗಿ ಹೇಳಿದ್ದರು. ಆ ನಂತರ ನಾನು ಮೈಸೂರಿನ ಕೆ.ಆರ್ ಆಸ್ಪತ್ರೆಗೆ ಹೋಗಿ ನೋಡಿದಾಗ ನನ್ನ ಹೆಂಡತಿ ಮರಣಹೊಂದಿರುವುದಾಗಿ ಹೇಳಿದ್ದರು ಆ ನಂತರ ನಾನು ಶವಾಗಾರಕ್ಕೆ ಹೋಗಿ ನೋಡಿದಾಗ ಅಲ್ಲಿ ನನ್ನ ಹೆಂಡತಿ ಶವ ಇತ್ತು ಅವಳ ತಲೆಗೆ ತೀವ್ರವಾದ

ಪೆಟ್ಟಾಗಿತ್ತು. ಆ ಮೋಹನ್ ಕುಮಾರ್ ಮತ್ತು ನನ್ನ ಹೆಂಡತಿ ಬಹಳ ದಿನಗಳಿಂದ ಬೇಕರಿ ಮಾಡುವುದಾಗಿ ಹೇಳಿಕೊಂಡು ಓಡಾಡುತ್ತಿದ್ದರು. ಅದೇ ವರ್ಷದ ಫೆಬ್ರವರಿ ತಿಂಗಳಿನಲ್ಲಿ ನನ್ನ ಹೆಂಡತಿಗೂ ಮತ್ತು ಮೋಹನ್ ಕುಮಾರ್ ಗೂ ಹಣಕಾಸಿನ ವಿಚಾರದಲ್ಲಿ ಗಲಾಟೆಯಾಗಿತ್ತು. ಅದೇ ಕಾರಣಕ್ಕೆ ಆರೋಪಿತ ನಮ್ಮ ಊರಿನ ನಟರಾಜ ಎನ್ನುವಾತನೊಂದಿಗೆ ಸೇರಿಕೊಂಡು ಅಶ್ಲೀಲ ವಿಡಿಯೋಗಳನ್ನು ಅಪ್ ಲೊಡ್ ಮಾಡುವುದಾಗಿ ನನ್ನ ಹೆಂಡತಿಗೆ ಬೆದರಿಕೆ ಹಾಕಿದ್ದ. ಆ ವಿಷಯಕ್ಕೆ ನನ್ನ ಹೆಂಡತಿ ಏಪ್ರಿಲ್ ತಿಂಗಳಿನಲ್ಲಿ ಅವರಿಬ್ಬರ ವಿರುದ್ಧ ಪಾಂಡವರಪುರ ಪೋ.ಠಾಣೆಯಲ್ಲಿ ದೂರು ಕೊಟ್ಟಿದ್ದರು. ಆ ಕಾಲಕ್ಕೆ ಪೋಲೀಸರು ಅವರಿಬ್ಬರಿಗೆ ಬುದ್ದಿ ಹೇಳಿ ಕಳುಹಿಸಿದ್ದರು.

*2.* ನನ್ನ ಹೆಂಡತಿಯ ಆಭರಣಗಳನ್ನು ಬ್ಯಾಂಕ್ ಆಫ್ ಬರೋಡದಲ್ಲಿ ಅಡ ಇಟ್ಟು ಆರೋಪಿತ *3,80,000/-* ಸಾವಿರ ಪಡೆದಿದ್ದ ಮತ್ತು ನನ್ನ ಹೆಂಡತಿಯ ಸಂಬಳದಿಂದ ಕೂಡಿ ಇಟ್ಟಿದ್ದ ಹಣ ಸೇರಿಸಿ ಆರೋಪಿತ ಒಟ್ಟು *6,80,000/-* ಸಾವಿರ ಹಣ ಪಡೆದು ಕೊಂಡಿದ್ದ. ಆ ದಿನ ಆರೋಪಿತ ನನ್ನ ಹೆಂಡತಿಗೆ ಹಲವಾರು ಬಾರಿ ಕರೆ ಮಾಡಿ ಹಣ ಕೊಡುವುದಾಗಿ ಸಿದ್ದಲಿಂಗಪುರಕ್ಕೆ ಕರೆಯಿಸಿಕೊಂಡು ಸಂಜೆ ವರೆಗೆ ಕೂರಿಸಿಕೊಂಡು ಕಬ್ಬಿಣದ ರಾಡಿನಿಂದ ಹಲ್ಲೆ ಮಾಡಿದ್ದ. ಆರೋಪಿತ ಮತ್ತು ನನ್ನ ಹೆಂಡತಿ ಸಲುಗೆಯಿಂದ ವರ್ತನೆ ಮಾಡುತ್ತಿದ್ದರಿಂದ ಆ ವಿಷಯಕ್ಕೂ ಸಹ ಇಬ್ಬರಿಗೂ ಬುದ್ದಿವಾದ ಹೇಳಿದ್ದೆ. ಆರೋಪಿತ ನಿನ್ನ ಹೆಂಡತಿಯ ಅಶ್ಲೀಲ ವಿಡಿಯೋಗಳನ್ನು ಸೋಷಿಯಲ್ ಮೀಡಿಯಾದಲ್ಲಿ ಅಪ್ ಲೊಡ್ ಮಾಡುವುದಾಗಿ ನನಗೂ ಸಹ ಬೆದರಿಕೆ ಹಾಕಿದ್ದ ಮತ್ತು ಪಾಂಡವಪುರ ಪೋಲೀಸರು ಬುದ್ದಿವಾದ ಹೇಳಿದ್ದ ಮರುದಿನ ಆರೋಪಿತ ರಾತ್ರಿ ವೇಳೆಯಲ್ಲಿ ನಮ್ಮ ಮನೆ ಬಳಿ ಬಂದು ನಿನ್ನನ್ನು ಕೊಲೆ ಮಾಡುತ್ತೇನೆ ಎಂದು ಬೆದರಿಕೆ ಹಾಕಿದ್ದ. ನನ್ನ ಹೆಂಡತಿಯ ಹಣ ವಾಪಸ್ಸು ಕೊಡಬೇಕಾಗುತ್ತದೆ ಎನ್ನುವ ಕಾರಣಕ್ಕೆ ಆರೋಪಿತ ನನ್ನ ಹೆಂಡತಿಯನ್ನು ಕೊಲೆ ಮಾಡಿದ್ದಾನೆ.

*3.* ನನ್ನ ಹೆಂಡತಿಯ ಶವವನ್ನು ನೋಡಿದ ಬಳಿಕ ಅದೇ ದಿನ ನಾನು ಮೇಟಗಳ್ಳಿ ಪೋ.ಠಾಣೆಗೆ ಹೋಗಿ ದೂರು ಕೊಟ್ಟಿದ್ದೆ. ಈಗ ನಾನು ನೋಡುತ್ತಿರುವ ದೂರು ಅದೇ ಇದ್ದು ಅದರಲ್ಲಿ ನನ್ನ ಸಹಿ ಇದೆ. ಸದರಿ ದೂರನ್ನು ನಿ.ಪಿ-*1* ಮತ್ತು ಸಹಿಯನ್ನು ನಿ.ಪಿ-*1(ಎ)* ಎಂದು ಗುರುತಿಸಿದೆ. ನಂತರ ಜುಲೈ ತಿಂಗಳಿನಲ್ಲಿ ಪೋಲೀಸರ ಮುಂದೆ ಮುಂದುವರೆದ ಹೇಳಿಕೆ ಕೊಟ್ಟಿದ್ದೆ. ಕೊಲೆಯಾಗಿದ್ದ ದಿನ ನನ್ನ ಹೆಂಡತಿ ಧರಿಸಿದ್ದ ಬಟ್ಟೆಗಳನ್ನು ನೋಡಿದರೆ ಗುರುತಿಸುತ್ತೇನೆ. ಆರೋಪಿತ ನನ್ನ ಮನೆ ಬಳಿ ಬಂದಾಗ ನನಗೆ ಆತನ ಪರಿಚಯವಾಗಿತ್ತು. ಈಗ ನಾನು ನೋಡುತ್ತಿರುವ ಟಾಪ್, ಪ್ಯಾಂಟ್, ಬ್ರಾ ಮತ್ತು ಪ್ಯಾಂಟಿ ನನ್ನ ಹೆಂಡತಿಯ ಬಟ್ಟೆಗಳು ಇವೆ. ಸದರಿ ಬಟ್ಟೆಗಳನ್ನು ಎಂ.ಓ *1* ರಿಂದ *4* ಎಂದು ಗುರುತಿಸಿದೆ. ಪಾಂಡವಪುರದಲ್ಲಿ ನನ್ನ ಹೆಂಡತಿ ಕೊಟ್ಟಿದ್ದ ದೂರನ್ನು ನೋಡಿದರೆ ಗುರುತಿಸುತ್ತೇನೆ. ಈಗ ನಾನು ನೋಡುತ್ತಿರುವ ದೂರು ಅದೇ ಇದ್ದು ಅದರಲ್ಲಿನ ಸಹಿ ನನ್ನ ಹೆಂಡತಿಯದ್ದು ಇದೆ. ಸದರಿ ದೂರನ್ನು ನಿ.ಪಿ-*2* ಮತ್ತು ಸಹಿಯನ್ನು ನಿ.ಪಿ-*2(ಎ)* ಎಂದು ಗುರುತಿಸಿದೆ.

<u>ಪಾಟೀ ಸವಾಲು</u> ಃ ಆರೋಪಿ ಪರ ವಕೀಲರು ಗೈರು ಹಾಜರಿದ್ದು ಆರೋಪಿತ ಸಮಯ ಕೋರಿದ್ದರಿಂದ ಮುಂದೂಡಲಾಗಿದೆ

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

*ಓ ಹೇ ಕೇ ಸ ಇ ಎ ಒ.,*

*4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,*
*ಮೈಸೂರು*